ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ ಎಸ್‌ವೈಎನ್ / ಅಸಾಮಾನ್ಯ ಸಭೆ/ ೨೨೮ / 2020–21 ದಿನಾಂಕ: 29.01.2021.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 20.01.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 20.01.2021 ರಂದು ಪೂರ್ವಾಹ್ನ 10–30 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/2020-21 ದಿನಾಂಕ: 29.01.2021.

ದಿನಾಂಕ 20.01.2021 ರಂದು ಪೂರ್ವಾಹ್ನ 10.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಎನ್. ನರಸಿಂಹಮೂರ್ತಿ | ಸಭಾಧ್ಯಕ್ಷರು |
| 2. | ಡಾ: ಅರವಿಂದ್ ಹೆಚ್.ಟಿ | ಸದಸ್ಯರು |
| 3. | ಶ್ರೀ.ಹೆಚ್.ಆರ್. ಸತೀಶ್ | ಸದಸ್ಯರು |
| 4. | ಪ್ರೊ: ಕೆ. ರಮೇಶ್ | ಸದಸ್ಯರು |
| 5. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 6. | ಶ್ರೀ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 7. | ಶ್ರೀ. ಕರಣ್‌ಕುಮಾರ್ | ಸದಸ್ಯರು |
| 8. | ಶ್ರೀ. ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀಮತಿ. ಜ್ಯೋತಿವಿಜಯ್ | ಸದಸ್ಯರು |
| 10. | ಶ್ರೀ. ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ:ಆರ್.ಕೆ. ಚಂದ್ರನಾಥ್ | ಸದಸ್ಯರು |
| 12. | ಶ್ರೀ. ಥಾಮಸ್ ನೀಲಿಯಾರ | ಸದಸ್ಯರು |
| 13. | ಡಾ: ವಿ. ಗಾಯತ್ರಿ | ಸದಸ್ಯರು |
| 14. | ಪ್ರೊ: ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. | ಶ್ರೀಮತಿ ಆರತಿ ಆನಂದ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಹಾಜರಿಲ್ಲದ ಸದಸ್ಯರು: ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ತಾಂತ್ರಿಕ ಶಿಕ್ಷಣ ನಿರ್ದೇಶಕರು, ಡಾ: ಎಂ. ಮುನಿರಾಜು, ಡಾ: ಪಿ.ವಿ. ಪದ್ಮಜಾ, ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು.

ಕುಲಸಚಿವರು, ಸಭಾಧ್ಯಕ್ಷರನ್ನು ಹಾಜರಿರುವ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು ದಿನಾಂಕ 20.01.2021 ರಂದು ಜರುಗಲಿರುವ ಅಸಾಮಾನ್ಯ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿರುವ ವಿಷಯಗಳನ್ನು ಪರಾಮರ್ಶಿಸಬೇಕೆಂದು ಕೋರಿದರು ಹಾಗೂ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿರುವ ಡಾ:ವಿ. ಗಾಯತ್ರಿ ರವರನ್ನು ಸಭೆಗೆ ಪರಿಚಯಿಸಿ ಅವರನ್ನು ಸಭೆಗೆ ಅಹ್ವಾನಿಸಿದರು.

**ವಿಷಯ ಸಂಖ್ಯೆ :– 1 – ದಿನಾಂಕ 28.12.2020 ರಂದು ಜರುಗಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 5ನೇ ಕೇಂದ್ರ ಖರೀದಿ ಸಮಿತಿ ಸಭೆ 2020–21 ನೇ ಸಾಲಿನ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ 2 ವರ್ಷಗಳಿಂದ ಸ್ವಚ್ಚತಾ ಕಾರ್ಯಕ್ಕೆ ನೌಕರರನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದವರಿಂದ ಇಲ್ಲಿ ಸ್ವಚ್ಛತಾ ಸೇವೆ ಪಡೆಯಲಾಗುತ್ತಿದೆ ಹಾಗೂ ಇವರಿಗೆ ಕನಿಷ್ಠ ಸಂಬಳವನ್ನೂ ಸಹ ನೀಡುತ್ತಿಲ್ಲ, ಕಡಿಮೆ ಸಂಬಳ ನೀಡಲಾಗುತ್ತಿದೆ. ಈ ವಿಷಯವಾಗಿ 4, 5 ಬಾರಿ ಟೆಂಡರ್ ಪ್ರಕ್ರಿಯೆಯನ್ನು ನಡೆಸಲಾಗಿದೆ. 5 ನೇ ಬಾರಿ ಟೆಂಡರ್ ಪ್ರಕ್ರಿಯೆಯಲ್ಲಿ 4 ಜನ ಬಿಡ್‌ದಾರರು L1 ಆಗಿ ಆಯ್ಕೆಯಾಗಿದ್ದಾರೆ. ಈ ಟೆಂಡರ್‌ನಲ್ಲಿ ನಮೂದಿಸಲಾಗಿರುವ parameters ಗಳಾದ Annual Turn Over, IT returns, Registration Certificate issued by Labour Department ಮತ್ತು Work Order ನಂತಹ ಪ್ರಮುಖ ಅಂಶಗಳನ್ನು ಪರಿಗಣಿಸಲಾಗಿದೆ. ಈ 4 ಜನ ಬಿಡ್‌ದಾರರಲ್ಲಿ 3 ಬಿಡ್‌ದಾರರು 4% Service Charge ಎಂದು ತಿಳಿಸಿರುತ್ತಾರೆ. 1 ಬಿಡ್‌ದಾರರು 4% Service Charge ಮತ್ತು GST 18% ಎಂದು ತೋರಿಸಿರುತ್ತಾರೆ. ಎಲ್ಲರೂ 18% GST ಯನ್ನು ನೀಡಬೇಕಾಗಿರುತ್ತದೆ. ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಜರೂರು ಕನಿಷ್ಠ ವೇತನ ನೀಡಬೇಕೆಂದು ತಿಳಿಸಿ ಈ ವಿಷಯದ ಬಗ್ಗೆ ಅನುಮತಿ ನೀಡಲು ಸಭಾಧ್ಯಕ್ಷರು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಎಂ. ಚಿಕ್ಕಮುನಿಯಪ್ಪ ರವರು ಮಾತನಾಡಿ ಸರ್ಕಾರ ಕನಿಷ್ಠ ವೇತನ ರೂ.13,000/– ನಿಗದಿ ಪಡಿಸಿದೆ. ಅದರಂತೆ, PF ಇತರೆಗಳನ್ನು ಕಡಿತಗೊಳಿಸಿಕೊಂಡು ರೂ.10,000/– ಗಳನ್ನು ಸಂದಾಯ ಮಾಡಲಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು, Point of Order ನ್ನು ತಿಳಿಸಿ, ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ಬಗ್ಗೆ ಚರ್ಚೆನಡೆಸುವ ಮುನ್ನ ಒಂದು ವಿಷಯವು ತೀರ್ಮಾನವಾಗಬೇಕಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಸಿಂಡಿಕೇಟ್ ವಿಶೇಷ ಸಭೆಗೆ, ವಿಶೇಷ ಅಜೆಂಡಾಗಳನ್ನು ತರಬೇಕಾಗಿರುತ್ತದೆ. ಆದರೆ ಈ ಸಭೆಗೆ ತಂದಿರುವ ಯಾವುದೇ ವಿಷಯಗಳನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟರು. ಈ ಹಿಂದೆ ನಡೆದ ಸಿಂಡಿಕೇಟ್ ಸಭೆಯಲ್ಲಿ Human Resource, Financial Status ಮತ್ತು Campus redevelopment ಗೆ ಸಂಬಂಧಿಸಿದ ವಿಷಯಗಳನ್ನು ಮಂಡಿಸಲು ನಿರ್ಣಯಿಸಲಾಗಿತ್ತು. ಆದರೆ ಇದುವರೆವಿಗೂ ಆ ವಿಷಯಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿರುವುದಿಲ್ಲ.

ಅಧ್ಯಕ್ಷರು ಅವರಿಗೆ ಉತ್ತರಿಸುತ್ತಾ ದಿನಾಂಕ 30.01.2021 ರಂದು ನಡೆಯಲಿರುವ ಸಿಂಡಿಕೇಟ್ ಸಭೆಗೆ ಆ ವಿಷಯಗಳನ್ನು ತರಬೇಕಾಗಿದ್ದು ಎಂದು ತಿಳಿಸಿ ದಿನಾಂಕ 30.01.2021 ರಂದು ಬೆಂಗಳೂರು ವಿಶ್ವವಿದ್ಯಾಲಯವು ಘಟಿಕೋತ್ಸವ ನಡೆಸಿತ್ತುರುವುದರಿಂದ ದಿನಾಂಕ 30.01.2021 ರಂದು ನಡೆಸಲು ಆಯೋಜಿಸಿರುವ ಸಿಂಡಿಕೇಟ್ ಮುಂದೂಡುವ ಸಂಭವವಿದ್ದು ಆ ಸಭೆಯಲ್ಲಿ ಈ ವಿಷಯಗಳನ್ನು ಮಂಡಿಸಲಾಗುವುದು ಎಂದು ಸೂಚಿಸಿದರು ಮತ್ತು ಈಗ ಮಂಡಿಸಲಾಗಿರುವ ವಿಷಯಗಳ ಮೇಲೆ ಜರೂರಾಗಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದುದರಿಂದ ಈ ವಿಶೇಷ ಸಭೆಗೆ ಮಂಡಿಸಲಾಗಿದೆ ಎಂದು ಹೇಳಿದರು. ಹಾಗೂ ಈ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವ ಮುನ್ನವೆ ಶ್ರೀಯುತರು ಅವರ ಆಕ್ಷೇಪಣೆಯನ್ನು ತಿಳಿಸಬೇಕಾಗಿತ್ತು ಮತ್ತು ಚರ್ಚೆಯು ಪ್ರಾರಂಭಗೊಂಡ ನಂತರ ಅವರು ಆಕ್ಷೇಪಣೆಯನ್ನು ತಿಳಿಸಿರುವುದರಿಂದ ಯಾವುದೇ ಕ್ರಮ ಜರುಗಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಅಧ್ಯಕ್ಷರ ಹೇಳಿಕೆಗೆ ಸನ್ಮಾನ್ಯ ಹೆಚ್. ಟಿ. ಅರವಿಂದ್ ರವರು, ಪರಿನಿಯಮ 4 (5.8) ರ ಪ್ರಕಾರ Point of Order ನಂತೆ ಚರ್ಚೆ ಪ್ರಾರಂಭವಾಗುವ ಮುನ್ನವೆ ಅವರ ಆಕ್ಷೇಪಣೆಯನ್ನು ತಿಳಿಸಿರುವುದಾಗಿ ಹೇಳಿದರು. ಅವರನ್ನು ಸಹಮತಿಸುತ್ತಾ ಮಾನ್ಯ ಸದಸ್ಯರಾದ ಶ್ರೀ. ಟಿ.ಹೆಚ್. ಶ್ರೀನಿವಾಸಯ್ಯ ರವರು ಚರ್ಚೆ ಇನ್ನೂ ಆರಂಭ ಆಗಿಲ್ಲ ಹಾಗೂ Point of Order ನ ಅಡಿಯಲ್ಲಿ ಅವರ ಆಕ್ಷೇಪಣೆ ಹೇಳಿದ್ದಾರೆ. ಅವರು ತಿಳಿಸಿರುವಂತೆ ವಿಶೇಷ ಸಭೆಗೆ ಮಂಡಿಸಬೇಕಾಗಿದ್ದ Financial Status, Campus redevelopment Audit, Human Resource ವಿಷಯಗಳನ್ನು ಮಂಡಿಸಿಲ್ಲ ಎಂದು ಅಭಿಪ್ರಾಯ ಪಟ್ಟರು.

ಅಧ್ಯಕ್ಷರು, ಮಾನವ ಸಂಪನ್ಮೂಲದ ವಿಷಯ ಜರೂರಾಗಿದೆ ಮತ್ತು ಪರೀಕ್ಷೆಗಳನ್ನು ನಡೆಸ ಬೇಕಾಗಿರುವುದರಿಂದ BOE ವಿಷಯದ ಬಗ್ಗೆ ಸಿಂಡಿಕೇಟ್ ಅನುಮೋದನೆ ಅತ್ಯವಶ್ಯಕವಾಗಿರುವುದರಿಂದ ಈ ವಿಷಯಗಳನ್ನು ಈ ಸಭೆಗೆ ತರಲಾಗಿದೆ ಎಂದು ಮನವರಿಕೆ ಮಾಡಿದರು.

ಡಾ: ಹೆಚ್. ಟಿ. ಅರವಿಂದ್ ರವರು ಕನಿಷ್ಠ ಒಂದು ವರ್ಷದಲ್ಲಿ 8 ಸಭೆಗಳನ್ನು ಮಾಡಬೇಕಾಗಿರುತ್ತದೆ. ಈ ವಿಶ್ವವಿದ್ಯಾಲಯದಲ್ಲಿ ಅಸಾಮಾನ್ಯ ಸಭೆ, ವಿಶೇಷ ಸಭೆಗಳನ್ನು ಕರೆಯಲಾಗುತ್ತಿದೆ ಹಾಗೂ ಮಂಡಿಸಲಾಗಿರುವ ವಿಷಯಗಳನ್ನೇ ಮರು ಮಂಡಿಸಲಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷರು ಇದಕ್ಕೆ ಉತ್ತರಿಸುತ್ತಾ ತಿಂಗಳಿಗೆ ಒಂದು ಸಭೆಯಂತೆ ಸಭೆಯನ್ನು ನಡೆಸಲಾಗುತ್ತಿದೆ ಎಂದರು. ವಿಷಯಗಳು ಅಧಿಕ ಇರುವಾಗ ವಿಶೇಷ ಸಭೆಗಳನ್ನು ಕರೆಯಲಾಗಿದೆ ಎಂದು ತಿಳಿಸಿದರು. ಇದಕ್ಕೆ ಡಾ: ಹೆಚ್. ಟಿ. ಅರವಿಂದ್ ರವರು, ಈಗಾಗಲೆ ತಿಂಗಳಿಗೆ ಒಂದು ಸಭೆ 3ನೇ ಶುಕ್ರವಾರದಂದು ನಡೆಸಲು ತೀರ್ಮಾನಿಸಲಾಗಿತ್ತು. ಅಧಿಕ ವಿಷಯಗಳನ್ನು ಚರ್ಚೆಗೆ ತರಲಾಗುತ್ತಿದೆ, ಆದುದರಿಂದ ಉತ್ತಮ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತಿಲ್ಲ ಎಂದರು. ಅಧ್ಯಕ್ಷರು ಸಾಮಾನ್ಯ ಸಭೆಗಳನ್ನು ಮುಂದೂಡಿರುವುದಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಹರಿಪ್ರಸಾದ್ ರವರು, ಕನಿಷ್ಠ 8 ಸಭೆಗಳನ್ನು ವರ್ಷದಲ್ಲಿ ನಡೆಸಬೇಕಾಗಿರುತ್ತದೆ. ಆದರೆ ಸುಮಾರು ಭಾರಿ ವಿಶೇಷ ಸಭೆಗಳನ್ನು ಕರೆಯಲಾಗುತ್ತಿದೆ ಎಂದು ಆಕ್ಷೇಪಿಸಿದರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು, ಕಾಲೇಜುಗಳ ಸಂಯೋಜನೆಯ ಬಗ್ಗೆ, ಪರೀಕ್ಷಾ ವಿಭಾಗದ ವಿಷಯಗಳ ಬಗ್ಗೆ, ಮಾನವ ಸಂಪನ್ಮೂಲದ ಬಗ್ಗೆ ಚರ್ಚೆಯಾಗ ಬೇಕಾಗಿರುವುದು ಒಳ್ಳೆಯ ವಿಷಯವೇ ಮತ್ತು Annual Accounts ಬಗ್ಗೆ ವಿಷಯವನ್ನು ಮಂಡಿಸದೇ ಇರುವುದು ಆಕ್ಷೇಪಣೀಯ ಎಂದರು ಹಾಗೂ ಸ್ವಾಯತ್ತ ಕಾಲೇಜುಗಳ ಸಂಯೋಜನೆಯ ಬಗ್ಗೆ ಚರ್ಚೆ ಮಾಡಲು ಸಹ ತಿಳಿಸಿದರು.

ಇದಕ್ಕೆ ಅಧ್ಯಕ್ಷರು, ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯವರು ನಿಯಮಾವಳಿಗೆ ಅನುಸಾರವಾಗಿ ಸಲ್ಲಿಸಬೇಕೆಂದು ತಿಳಿಸಿದ್ದಾರೆ. ನವೀಕರಣಕ್ಕೆ ಸಂಬಂಧಿಸಿದಂತೆ ಹೊಸ ಮಾರ್ಗಸೂಚಿಗಳನ್ನು ಸರ್ಕಾರವು ತಕ್ಷಣದಲ್ಲೇ ಹೊರಡಿಸುತ್ತಿರುವುದಾಗಿ ತಿಳಿಸಿದ್ದಾರೆ. ಆದುದರಿಂದ ಸಂಯೋಜನೆಯ ವಿಷಯ ಇಂದಿನ ಸಭೆಯ ವಿಷಯವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಆದುದರಿಂದ ಜರೂರಾಗಿ ನಿರ್ಣಯ ಪಡೆಯಬೇಕಾಗಿರುವ ವಿಷಯಗಳನ್ನು ಈ ಸಭೆಗೆ ಮಂಡಿಸಲಾಗಿದೆ ಎಂದು ಮನವಿ ಮಾಡಿದರು.

ಮಾನ್ಯ ಶ್ರೀ ಆರ್. ಕೆ. ಚಂದ್ರನಾಥ್ ಸದಸ್ಯರು ಮಾತನಾಡುತ್ತಾ ಅಧ್ಯಕ್ಷರು ತಿಳಿಸಿದಂತೆ ನಕ್ಷೆ ಮತ್ತು Fire Safety ಬಗ್ಗೆ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡುವ ಮುನ್ನವೇ ಸರ್ಕಾರವು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು ಎಂದು ಹೇಳಿದರು.

ಅಧ್ಯಕ್ಷರು ಈ ಆಕ್ಷೇಪಣೆಗೆ ಪ್ರತಿಕ್ರಿಯಿಸುತ್ತಾ, ಇದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಶ್ನೆ ಒಂದೇ ಆಗಿರುವುದಿಲ್ಲ. ಇದು ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದೆ ಹಾಗೂ ಈಗಾಗಲೇ Higher Education Council 2-3 ಬಾರಿ ಸಭೆಯನ್ನು ನಡೆಸಿ software problem ಎಂದು ತಿಳಿಸಿ ಸರಿಪಡಿಸಿ ಹೊಸ ಮಾರ್ಗಸೂಚಿಯನ್ನು ಹೊರಡಿಸುವುದಾಗಿ ತಿಳಿಸಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ಹರಿಪ್ರಸಾದ್ ರವರು ಹಾಗಾದರೆ ಈ ದಿನ ಜರುಗುತ್ತಿರುವ ಸಿಂಡಿಕೇಟ್ ವಿಶೇಷ ಸಭೆಯನ್ನು ಅಸಾಮಾನ್ಯ ಸಭೆ ಎಂದು ತಿದ್ದುಪಡಿ ಮಾಡಿಕೊಂಡು ಸಭೆಯ ನಡಾವಳಿಗಳನ್ನು ಮುಂದುವರೆಸಲು ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಅನುಮತಿಸಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು, ವಿಶೇಷ ಸಭೆಗಳನ್ನು ಯಾವುದೇ ಮುಂಜಾಗ್ರತೆ ಇಲ್ಲದೆ ಕರೆಯುತ್ತಿರುವುದು ಒಳ್ಳೆಯ ಅಭ್ಯಾಸವಲ್ಲ ಎಂದು ತಿಳಿಸಿದರು. Annual Accounts ಬಗ್ಗೆ ಕೇಳಿ 1 1/2 ವರ್ಷಗಳಾದರೂ ಇದುವರೆಗೂ ವಿಷಯವನ್ನು ಮಂಡಿಸಿಲ್ಲ. ಫೆಬ್ರವರಿ 10 ರಿಂದ ಪರೀಕ್ಷೆಗಳನ್ನು ನಡೆಸಲು ದಿನಾಂಕ ಗೊತ್ತುಪಡಿಸಿ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯವು ಹೊರಡಿಸಿದೆ. ಆದರೆ, ಸಂಯೋಜನಾ ನವೀಕರಣ ಇಲ್ಲದೆ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಮಾಡಲು ಅವಕಾಶವಿರುವುದಿಲ್ಲ, ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಪ್ರಕ್ರಿಯೆ ಇನ್ನು ಪ್ರಾರಂಭವಾಗಿಲ್ಲ ಕಾರಣ ಸಂಯೋಜನಾ ಆದೇಶ ಹೊರಡಿಸದೆ ಇರುವುದು. ಸರ್ಕಾರದಲ್ಲಿ ಚರ್ಚೆ ಆಗುತ್ತಿರುವ ವಿಷಯ ಮುಂದಿನ ಸಾಲಿಗೆ ಸಂಬಂಧಿಸಿರುತ್ತದೆ ಮತ್ತು ಪ್ರಸ್ತುತ ವರ್ಷದಲ್ಲ ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀ ಕೆ. ರಮೇಶ್ ರವರು ಶ್ರೀಮತಿ ಜ್ಯೋತಿ ವಿಜಯ್ ರವರ ಅಭಿಪ್ರಾಯವನ್ನು ಸಹಮತಿಸುತ್ತಾ ಈಗಾಗಲೇ 1 1/2 ತಿಂಗಳ ಹಿಂದೆ ಸ್ಥಳೀಯ ವಿಚಾರಣ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ ವರದಿಗಳನ್ನು ಸಲ್ಲಿಸಿದ್ದಾರೆ. ಈ ವೇಳೆಗಾಗಲೆ ವರದಿಗಳನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಗಳಲ್ಲಿ ಮಂಡಿಸಿ ಸಂಯೋಜನಾ ಆದೇಶವನ್ನು ಹೊರಡಿಸಬೇಕಿತ್ತು. ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡುವುದು ಬಿಡುವುದು ಸರ್ಕಾರದ ಅಧೀನದಲ್ಲಿ ಇದೆ ಎಂದು ಸಭೆಗೆ ತಿಳಿಸಿದರು.

ಅಧ್ಯಕ್ಷರು ಅದಕ್ಕೆ ಉತ್ತರವಾಗಿ ಯಾರೂ ಸಹ ಈಗಾಗಲೆ ಸಲ್ಲಿಸಲಾಗಿರುವ ವರದಿಗಳನ್ನು ಮಾರ್ಪಡಿಸಲು (modify) ಅವಕಾಶ ಇರುವುದಿಲ್ಲ ಮತ್ತು ಈ ವಿಷಯದ ಬಗ್ಗೆ ಸುಮಾರು ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಪತ್ರಗಳನ್ನು ಸಲ್ಲಿಸಿದ್ದಾರೆ. ಕೆಲವು ವಿಷಯಗಳು ಅಂದರೆ, ಹೊಸ ಕೋರ್ಸ್, ವಿದ್ಯಾರ್ಥಿ ಪ್ರಮಾಣ ಹೆಚ್ಚಳಿಕೆ ಬಗ್ಗೆ ಬಿಟ್ಟು ಹೋಗಿದೆ ಎಂದು ಮನವಿ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಹರಿಪ್ರಸಾದ್ ರವರು ಈ ವರದಿಗಳ ಬಗ್ಗೆ ಮಾತನಾಡುತ್ತಾ ಅವರು Bishop Cotton ಕಾಲೇಜಿಗೆ ಭೇಟಿ ನೀಡಿದಾಗ ಕಾಲೇಜಿನವರು Additional Courses ಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿ portal ನಲ್ಲಿ ಕಂಡು ಬಂದಿರುವುದಿಲ್ಲ ಎಂದು ಸಮಿತಿಗೆ ತಿಳಿಸಿದರು. ಇಂತಹ ಸಂದರ್ಭದಲ್ಲಿ ಸ್ಥಳೀಯ ವಿಚಾರಣಾ ಸಮಿತಿಯವರು ಯಾವುದೇ ನಿರ್ಣಯವನ್ನು ತೆಗೆದು ಕೊಳ್ಳಲಾಗುವುದಿಲ್ಲ ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಈ ವರದಿಗಳಿಗೆ ಲಿಮಿಟೇಷನ್ ಇದೆ, score sheet ನ್ನು ಸಮಿತಿಯವರು ಭೇಟಿ ನೀಡಿದ ಅದೇ ದಿನ ಸಲ್ಲಿಸಿದ್ದಾರೆ ಆದರೆ ವಿಶ್ವವಿದ್ಯಾನಿಲಯವು ವರದಿಗಳನ್ನು ಇದುವರೆವಿಗೂ generate ಮಾಡಿರುವುದಿಲ್ಲ.

ಸದಸ್ಯರಾದ ಡಾ: ಲಿಡಿಯಾ ಪಿ. ಸ್ಯಾಮುಯೆಲ್ ರವರು ಸ್ಥಳೀಯ ವಿಚಾರಣಾ ಸಮಿತಿಯವರು parameter ನಂತೆscore ನ್ನು ನೀಡಿರುತ್ತಾರೆ. ಅದರಂತೆ ಅರ್ಹ ಕಾಲೇಜುಗಳಿಗೆ ಸಂಯೋಜನೆಗಳನ್ನು ನೀಡಬೇಕಾಗಿರುತ್ತದೆ ಎಂದರು. ವಾಣಿಜ್ಯ ವಿಭಾಗಗಳಲ್ಲಿ ಪ್ರಾಯೋಗಿಕ ವಿಷಯ ಇಲ್ಲದೆ ಇರುವುದರಿಂದ ಆ ಕಾಲಂನ್ನು ತುಂಬಲು ಸಾಧ್ಯವಿರುವುದಿಲ್ಲ ಎಂದರು.

ಕುಲಸಚಿವರು ಮಾತನಾಡುತ್ತಾ, ಇದುವರೆವಿಗೂ 10 ಕಾಲೇಜುಗಳಿಗೆ ಸಂಬಂಧಿಸಿದಂತೆ ಸಂಯೋಜನಾ ವರದಿಗಳು ವಿಶ್ವವಿದ್ಯಾನಿಲಯವನ್ನು ತಲುಪಿರುವುದಿಲ್ಲ ಎಂದು ತಿಳಿಸಿದರು. ಶೈಕ್ಷಣಿಕ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ನಿವೃತ್ತ ನೌಕರರು ಕಾರಣಾಂತರದಿಂದ ಕೆಲಸಕ್ಕೆ ಹಾಜರಾಗದೆ ಇರುವುದರಿಂದ ಅ ವಿಭಾಗದ ಕೆಲಸ ಕಾರ್ಯಗಳನ್ನು ಹೊರಗುತ್ತಿಗೆ ನೌಕರರು ಮಾಡುತ್ತಿದ್ದಾರೆ ಮತ್ತು ಅವರು ಸಲ್ಲಿಸುವ ಕಡತಗಳ ಮೇಲೆ ನಿರ್ಣಯ ತೆಗೆದುಕೊಳ್ಳಲು ಅವರಿಗೆ ಕಷ್ಟವಾಗುತ್ತಿದೆ ಎಂದು ತಿಳಿಸಿದರು ಮತ್ತು Flow Chart ಪ್ರಕಾರ LIC ವರದಿಗಳನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಮಾನ್ಯ ಅಧ್ಯಕ್ಷರೆ 30% ಕಾಲೇಜಿಗೆ ಸಂಯೋಜನಾ ನವೀಕರಣದ ಅರ್ಹತೆ ಇಲ್ಲದೆ ಇರುವ ಬಗ್ಗೆ ಸಿಂಡಿಕೇಟ್ ಸಭೆಗೆ ಮಂಡಿಸಿ, ಸಿಂಡಿಕೇಟ್ ನಿರ್ಣಯ ನೀಡುತ್ತದೆ, ನೀವೆ ನಿರ್ಣಯ ತೆಗೆದುಕೊಳ್ಳುವ ಹಾಗಿಲ್ಲ ಎಂದರು. ಹೊಸ ಕಾಲೇಜುಗಳ ಬಗ್ಗೆ ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳುತ್ತದೆ priority-wise ಕೆಲಸ ನಡೆಯುತ್ತಿಲ್ಲ ಎಂದರು.

ಸದಸ್ಯರಾದ ಶ್ರೀ ಹೆಚ್. ಟಿ. ಅರವಿಂದ್ ರವರು ಸಾಮಾನ್ಯ ಚರ್ಚೆಯಲ್ಲಿ ನಿರ್ಣಯ ಮಾಡಬಹುದು ಎಂದರು. ಶ್ರೀ ಕರಣ್‌ಕುಮಾರ್ ರವರು ಸಭೆಯ ಗಮನ ಸೆಳೆಯ ಬಯಸುತ್ತೇನೆ ಎಂದು ತಿಳಿಸುತ್ತಾ ಎಲ್ಲಾ ಕಡೆ zero hour ಚರ್ಚೆಗೆ ಅವಕಾಶವಿರುತ್ತದೆ. ಎಲ್ಲಾ ವಿಷಯಗಳನ್ನು ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ಶೂನ್ಯ ವೇಳೆಯ ಚರ್ಚೆಗೆ ಎಂದು ಸಮಯ ನಿಗದಿ ಪಡಿಸಿ burning issue ಗಳನ್ನು ನಿರ್ಧರಿಸಬಹುದಾಗಿರುತ್ತದೆ. High Court, Supreme Court, Parliament, Assembly ಎಲ್ಲಾ ಕಡೆ ವೈಯ್ಯುಕ್ತಿಕ ಚರ್ಚೆಗಳು zero hour ನ 5 ನಿಮಿಷಗಳ ಸಮಯದಲ್ಲಿ ನಿರ್ಣಯಮಾಡಲಾಗುತ್ತದೆ.

ಅಧ್ಯಕ್ಷರು, ಕೆಲವು ಕಾಲೇಜಿನವರು ಸಂಯೋಜನೆಗೆ ಸಂಬಂಧಿಸಿದಂತೆ ಪತ್ರಗಳನ್ನು ನೀಡಿದ್ದಾರೆ ಮತ್ತು ಅವುಗಳ ಪಟ್ಟಿ ತಯಾರಿಸಲಾಗಿದೆ ಇದರೊಂದಿಗೆ 13 ಕಾಲೇಜುಗಳ Score Board ಕುಲಪತಿಗಳ ಪೋರ್ಟಲ್ ನಲ್ಲಿ ಕಾಣಿಸುತ್ತಿಲ್ಲ ಎಂದು ತಿಳಿಸಿದರು. ಎಲ್ಲಾ ಕಾಲೇಜುಗಳ score sheet ಬಂದ ನಂತರ, ವಿದ್ಯಾವಿಷಯಕ ಪರಿಷತ್ತಿನ ಸಭೆ ಮತ್ತು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುವುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಆರ್. ಕೆ. ಚಂದ್ರನಾಥ್ ರವರು, ವರದಿ ಬರೆಯುವಾಗ ಕಾಲೇಜಿನವರಿಗೆ score sheet ಕಂಡುಬರುತ್ತದೆ ಮತ್ತು ಅವರು ಅ ವರದಿಗೆ ಸಹಿ ಹಾಕುತ್ತಾರೆ. ತತ್ಸಂಬಂಧಿತ ಅಭಿಪ್ರಾಯ ಆಗಲೇ ಮಂಡಿಸಲು ಅವಕಾಶವಿರುತ್ತದೆ.

ಕುಲಸಚಿವರು, ಕಾಲೇಜಿನವರು ಸಲ್ಲಿಸಿರುವ ಮನವಿ ಪತ್ರಗಳ ಮೇಲೆ ಯಾವುದೇ ನಿರ್ಣಯವನ್ನು (endorse) ಮಾಡಿರುವುದಿಲ್ಲ / ತೆಗೆದುಕೊಂಡಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಅಧ್ಯಕ್ಷರು, ಮಾತನಾಡುತ್ತಾ ಈ ತಿಂಗಳಿನಲ್ಲಿಯೇ ಶೈಕ್ಷಣಿಕ ಸಭೆಯಲ್ಲಿ ಮಂಡಿಸಿ ಮುಂದಿನ ಸಾಮಾನ್ಯ ಸಿಂಡಿಕೇಟ್ ಸಭೆಗೆ ವರದಿಗಳನ್ನು ತರಲಾಗುವುದು ಎಂದರು.

ಸದಸ್ಯರಾದ ಶ್ರೀ ಹರಿಪ್ರಸಾದ್ ರವರು, ಈ ವಿಷಯದ ಬಗ್ಗೆ ಚರ್ಚೆ ನಿಲ್ಲಿಸಿ ಆದಷ್ಟು ಬೇಗ ವರದಿಗಳನ್ನು ಶೈಕ್ಷಣಿಕ ಸಭೆಗೆ ಮಂಡಿಸಿ ಅಲ್ಲಿಯ ನಿರ್ಣಯದೊಂದಿಗೆ ಸಿಂಡಿಕೇಟ್ ಸಭೆಗೆ ತರಲು ಕೋರಿಕೊಂಡರು. ಇಲ್ಲಿಗೆ ಈ ವಿಷಯದ ಬಗ್ಗೆ ಚರ್ಚೆ ಮುಗಿಸುವುದು ಒಳ್ಳೆಯದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಲಸಚಿವರು ಗಮನಕ್ಕೆ ತೆಗೆದುಕೊಂಡಿರುವುದಾಗಿ ಸಭೆಗೆ ತಿಳಿಸಿದರು.

**ವಿಷಯ ಸಂಖ್ಯೆ: I: ಇ–ಪ್ರಕ್ಯೂರ್‌ಮೆಂಟ್ ಮುಖೇನ ಹೊರಗುತ್ತಿಗೆ ಸ್ವಚ್ಛತಾ ಸಿಬ್ಬಂದಿಗಳ ನೇಮಕಾತಿಗಾಗಿ ಕರೆಯಲಾದ ತಾಂತ್ರಿಕ/ಆರ್ಥಿಕ ಬಿಡ್‌ಗಳ ಪರಿಶೀಲನೆ ಹಾಗೂ ಅರ್ಹ ಬಿಡ್‌ದಾರರ ಅನುಮೋದನೆ ಕುರಿತು**

ಸದಸ್ಯರಾದ ಶ್ರೀ ಚಂದ್ರನಾಥ್ ತಡ ಆಗಬಾರದು, ತಾಂತ್ರಿಕ ತೊಂದರೆ ಇಲ್ಲದಿದ್ದರೆ ಒಪ್ಪಬಹುದು ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು tie documentation, Service charge ಬಗ್ಗೆ ಯಾವುದೇ ಸೂಚನೆ ನಿಯಮಾವಳಿಗಳನ್ನು ಪಾಲಿಸಿರುವ ಬಗ್ಗೆ ಅಸಾಮಾಧಾನ ವ್ಯಕ್ತಪಡಿಸಿದರು.

ಕುಲಸಚಿವರು ಮಾತನಾಡುತ್ತಾ tie breaker ಬಗ್ಗೆ documentation ನಮೂದು ಇರುವುದಿಲ್ಲ ಈ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ನವರು ಟೆಂಡರ್ ಹೊರಡಿಸಿದ ದಿನದಿಂದ ಇದುವರೆವಿಗೂ ಆಗಿರುವ ಕ್ರಮಗಳನ್ನು ಕೂಲಂಕುಷವಾಗಿ ನೋಡಿ ಅನುಮೋದಿಸಬಹುದು ಎಂದರು ಮತ್ತು ಅದಕ್ಕೆ ಅನುಸರವಾಗಿ ಕಡತಗಳನ್ನು substantiate ಮಾಡಿ ಎಂದು ಸೂಚಿಸಿದರು.

ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪ ರವರು ಈ ವಿಷಯವನ್ನು ಮುಂದಿನ ಸಭೆಗೆ ಮಂಡಿಸಲು ಸೂಚಿಸಿದರು.

ಕುಲಸಚಿವರು ಕಾರ್ಮಿಕ ಇಲಾಖೆಯವರು Labour Act ಪ್ರಕಾರ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವವರಿಗೆ ಕನಿಷ್ಠ ಸಂಬಳ ನೀಡದೆ ಇರುವುದರಿಂದ ನೋಟಿಸ್ ನೀಡಿದರೆ ತೊಂದರೆಯಾಗಬಹುದು ಎಂದು ಸಭೆಗೆ ತಿಳಿಸಿದರು. ಈಗಾಗಲೆ 4 ಬಾರಿ ಟೆಂಡರ್ ಆಗಿದ್ದರೂ, ಈ ವಿಷಯದ ಬಗ್ಗೆ ಯಾವುದೇ ನಿರ್ಣಯ ಆಗಿರುವುದಿಲ್ಲ. ಈಗ 5 ನೇ ಬಾರಿ ಟೆಂಡರ್‌ಗೂ ಸಹ ನಿರ್ಣಯ ಸಿಗುತ್ತಿಲ್ಲ ಎಂದರು. ಹಾಗೂ ಈ ಟೆಂಡರ್ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರೆಗೂ ಈಗ ಕೆಲಸ ನಿರ್ವಹಿಸುತ್ತಿರುವವರನ್ನು ಕನಿಷ್ಠ ವೇತನದೊಂದಿಗೆ ಮುಂದುವರಿಸಬೇಕಾಗಿರುತ್ತದೆ ಎಂದು ಪ್ರಸ್ತುತ ಪರಿಸ್ಥಿತಿಯನ್ನು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಕೇಂದ್ರಿಯ ಖರೀಧಿ ಸಮಿತಿ ಟೆಂಡರ್ ರನ್ನು ಕೂಲಂಕುಷವಾಗಿ ಪರಿಶೀಲಿಸಿ, negotiate ಮಾಡಿ ಎಲ್ಲಾ ದಾಖಲಾತಿಗಳೊಂದಿಗೆ ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಬೇಕಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ರವರು CPC recommendation ಮೇಲೆ ಸಿಂಡಿಕೇಟ್ ಸಭೆಯು ಕೊನೆಯ ತೀರ್ಮಾನ ಮಾಡುತ್ತದೆ ಮತ್ತು CPC ನಿರ್ಣಯವನ್ನು ಒಪ್ಪುವುದು ಬಿಡುವುದು ಸಿಂಡಿಕೇಟ್ ಸಭೆಯ ಅಧಿಕಾರದಲ್ಲಿದೆ ಎಂದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಈ ತರಹದ ನಿರ್ಣಯ ಬರೆದಿದ್ದರೆ ಪ್ರಶ್ನೆ ಕೇಳಲು ಬರುವುದಿಲ್ಲ. ಪ್ರಸೆಂಟ್ ಮಾಡುವಾಗಲೆ consider ಮಾಡಿ ಬಿಟ್ಟರಿ ನಿರ್ಣಯವನ್ನು ಎಂದು ಅರ್ಥೈಸಿದರು. ಈ ಟೆಂಡರ್ ಗೆ 90 ದಿನಗಳ ಅವಧಿ ನೀಡಲೆ ಬೇಕೆಂದರು. ಇನ್ನು ಮುಂದೆ ಸಿಂಡಿಕೇಟ್ ಸಭೆಯು ನಡೆಯುವ ಜಾಗದಲ್ಲಿ ಒಂದು projector ನ್ನು ಸಿದ್ದಪಡಿಸಿ, projector ನಲ್ಲಿ ಎಲ್ಲಾ ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕು ಎಂದು ಆಗ್ರಹಿಸಿದರು. ಕುಲಸಚಿವರು ಎಲ್ಲಾ ದಾಖಲೆಗಳನ್ನು ಒದಗಿಸುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪ ನವರು ಅಧ್ಯಕ್ಷರ ಅನುಮತಿಯೊಂದಿಗೆ ತಮ್ಮ ಅನುಮಾನವನ್ನು ಪರಿಹರಿಸಲು ಕೋರಿ CPC ನಿರ್ಣಯ ಹೆಚ್ಚಿನದೊ ಅಥವಾ ಸಿಂಡಿಕೇಟ್ ಸಭೆಯ ನಿರ್ಣಯ ಹೆಚ್ಚಿನದೋ ಎಂದು ತಿಳಿಸಲು ಕೋರಿದರು.

ಅದಕ್ಕೆ ಉತ್ತರವಾಗಿ ಅಧ್ಯಕ್ಷರು CPC ನಿರ್ಣಯ ಮಾಡಬಹುದು ಅದೂ ಸಹ Statutory body, CPC ನಿರ್ಣಯವನ್ನು ಪರಿಗಣಿಸುವುದು ಮತ್ತು ಪರಿಗಣಿಸದೇ ಇರುವುದು ಸಿಂಡಿಕೇಟ್ ಸಭೆಯ ವ್ಯಾಪ್ತಿಯಲ್ಲಿ ಇರುತ್ತದೆ ಎಂದು ಅವರ ಅನುಮಾನವನ್ನು ಪರಿಹರಿಸಿದರು.

ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ರವರು ಮಾತನಾಡಿ CPC agenda 2 ದಿನದ ಮುಂಚೆ ನೀಡಬೇಕಿತ್ತು, ಟೇಬಲ್ ಅಜೆಂಡ ಆಗಿ ನೀಡಿದ್ದನ್ನು ನಾನು ಒಪ್ಪಿರುವುದಿಲ್ಲ. Procurement, Labour Department, Police Comission ರವರು ನೋಟೀಸು ನೀಡಿದಲ್ಲಿ ಅದನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲು ಸೂಚಿಸಿದರು. 4 ಅರ್ಹ L1 ಆದ ಬಿಡ್ ದಾರರು 4% ಎಂದು ಸೂಚಿಸಿದ್ದಾರೆ, 4 ನೇ ಅರ್ಹ L1 ಬಿಡ್ ದಾರರು 4% ಜೊತೆಗೆ 18% GST ಸೇರಿಸಿದ್ದಾರೆ. ಆದರೆ ಇವರು ಮೆಟೀರಿಯಲ್ಲುಗಳನ್ನು ಹೊರತು ಪಡಿಸಿ ಎಂದು quote ಮಾಡಿದ್ದಾರೆ. ಇದು ಸಮಂಜಸವಲ್ಲ. ಎಲ್ಲಾ ಕೇಸುಗಳಲ್ಲಿ 18% + 4% is understood. ಆದುದರಿಂದ ಈ ಟೆಂಡರನ್ನು ಒಪ್ಪಿಕೊಳ್ಳಲಾಗುವುದಿಲ್ಲ ಎಂದು ತಿಳಿಸಿದರು. ಹಾಗೂ ಸಮಯ (validity) 90 ದಿನಗಳು ಮುಗಿದು ಹೋಗಿರುವುದರಿಂದ KTTP Act ಉಲ್ಲಂಘನೆ ಆಗಿದೆ ಎಂದು ಯಾರಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಿದರೆ ಅದು ವಿಶ್ವವಿದ್ಯಾನಿಲಯದ ಕಡೆಯಿಂದ ಆದ ತುಂಬಾ ದೊಡ್ಡ ತಪ್ಪು ಆಗಿರುತ್ತದೆ.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು Tie ಆಗಿರುವ ಟೆಂಡರ್ ದಾಖಲಾತಿಗಳನ್ನು ಒದಗಿಸಿರುವುದಿಲ್ಲ, ಒಂದು ವರ್ಷಕ್ಕೆ ಎಂದು ಟೆಂಡರ್ ಕರೆಯಲಾಗಿದೆ ಮತ್ತು ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವರು unskilled ಕೆಲಸಗಾರರಾಗಿರುವುದರಿಂದ ಮುಂದಕ್ಕೆ ಹೋಗಬಹುದು ಎಂದು ಅಭಿಪ್ರಾಯ ಪಟ್ಟರು.

ಅಧ್ಯಕ್ಷರು ಮಾತನಾಡುತ್ತಾ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಕೇಂದ್ರಿಯ ಖರೀಧಿ ಸಮಿತಿ ಸಭೆಯ ಸದಸ್ಯರು, ಅಜೆಂಡವನ್ನು 28.12.2020 ರಂದು ನೀಡಿದಾಗ ಸಭೆಯನ್ನು ಮುಂದೂಡಲು ಕೋರಿದರು. 24 ಗಂಟೆಗಳ ನಂತರ ಸಭೆಯನ್ನು ನಡೆಸಲಾಯಿತು. Technical problem ಬಗ್ಗೆ ಇತರ ಸದಸ್ಯರು ಯಾವುದನ್ನು ಗಮನಕ್ಕೆ ತಂದಿರುವುದಿಲ್ಲ. ಇದನ್ನು ಈ ಹಿಂದೆ ಇದ್ದ ವಿತ್ತಾಧಿಕಾರಿಗಳ ಬಳಿ ಕುಳಿತು

ಚರ್ಚಿಸಲಾಗಿದೆ. ಏಕೆಂದರೆ ಅವರಿಗೆ ಇದರ ಬಗ್ಗೆ ಪೂರ್ಣ ಮಾಹಿತಿ ಇತ್ತು. L1 ಆಗಿರುವ ಎಲ್ಲರೂ 4% Service charge ಎಂದು ನಮೂದಿಸಿರುವುದು ಹಾಗೂ ಪ್ರತಿಯೊಂದಕ್ಕೂ GST ಅನ್ವಯವಾಗುವುದರಿಂದ 18% GST ನ್ನು ಎಲ್ಲರೂ ಭರಿಸಲೇಬೇಕು. ಆದರೆ ಅದನ್ನು ಉಳಿದ ಬಿಡ್‌ದಾರರು ನಮೂದಿಸಿರುವುದಿಲ್ಲ. ಇದರಲ್ಲಿ KTTP Act violation ಆಗಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ ನಾಲ್ಕು ಬಿಡ್‌ದಾರರಿಗೆ Lottery System ಮಾಡಲು ಅನುಮತಿ ಕೇಳಿದಾಗ 3 ಬಿಡ್ ದಾರರು ಒಪ್ಪಿದರು. ಒಬ್ಬರು ಒಪ್ಪಿರುವುದಿಲ್ಲ. ನಂತರ parameter ನಲ್ಲಿ ಇರುವಂತೆ ಮಾಡಲಾಯಿತು. ಮತ್ತೊಮ್ಮೆ Lottery ಮುಖಾಂತರ ನಿರ್ಣಯ ತೆಗೆದುಕೊಳ್ಳಲು ಕೇಳಿದ್ದರು. ಟೆಂಡರ್ ಹೊರಡಿಸುವಾಗ Tie breaker ನ್ನು ಟೆಂಡರ್‌ನಲ್ಲಿ ನಮೂದಿಸಿರುವುದಿಲ್ಲ ಮತ್ತು GST ಸಂಬಂಧಿತವಾಗಿಯೂ ತಿದ್ದುಪಡಿ ಹೊರಡಿಸಲಾಗಿದೆ.

ಈ ವಿಷಯದ ಬಗ್ಗೆ ಮತ್ತೊಮ್ಮೆ ಟೆಂಡರ್ ಹೊರಡಿಸುವಾಗ ಎಲ್ಲವನ್ನೂ ಗಮನದಲ್ಲಿರಿಸಿಕೊಂಡು ಟೆಂಡರ್ document ನ್ನು ಹೊರಡಿಸಲಾಗುವುದು ಎಂದು ಸಭೆಗೆ ತಿಳಿಸಿ ಈ ಟೆಂಡರ್ ಕರೆದು ನಿಯಮಾವಳಿಗಳಂತೆ ಟೆಂಡರ್ ಪ್ರಕ್ರಿಯೆ ಪೂರೈಸುವವರೆಗೆ <u>ತೆಗೆದುಕೊಳ್ಳಬೇಕಾದ ನಿರ್ಧಾರದ ಬಗ್ಗೆ ತಿಳಿಸಿದರು.</u>

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು, ಈಗ ತಗಲುತ್ತಿರುವ ವೆಚ್ಚ ಮತ್ತು ಟೆಂಡರ್ ನಂತರ ತಗಲುವ ಅಂದಾಜು ವೆಚ್ಚದ ಬಗ್ಗೆ ತಿಳಿಸಲು ಕುಲಸಚಿವರನ್ನು ಕೋರಿದರು.

ಕುಲಸಚಿವರು ಈಗ ತಗಲುತ್ತಿರುವ ಮಾಸಿಕ ಸುಮಾರು ವೆಚ್ಚ ರೂ. 2,63,000/- ಟೆಂಡರ್ ಪ್ರಕ್ರಿಯೆಯ ನಂತರ ಅಂದಾಜು ವೆಚ್ಚ ರೂ. 5,00,000 ದವರೆಗೂ ಆಗಬಹುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಹಾಗಾದಲ್ಲಿ ಈಗಿರುವ ವ್ಯವಸ್ಥೆಯನ್ನೇ ಮುಂದುವರೆಸಿ. ಈ ಟೆಂಡರ್‌ನ್ನು ರೀ-ಟೆಂಡರ್ ಮಾಡಿ, ಟೆಂಡರ್ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸೂಚಿಸಿದರು.

ಅಧ್ಯಕ್ಷರು, ಯಾವುದೇ ಕಾರಣದಲ್ಲಿ ಈಗಿರುವವರನ್ನು ಮುಂದುವರೆಸಲು ಸಾಧ್ಯವಿರುವುದಿಲ್ಲ ಏಕೆಂದರೆ ಅವರು ಪಿ. ಎಫ್, ಮತ್ತು ಇ. ಎಸ್. ಐ ಇತರೆಗಳನ್ನು ಸ್ವಚ್ಛತಾ ನೌಕರರಿಗೆ ನೀಡಿರುವ ಬಗ್ಗೆ ಗೊಂದಲವಿದೆ. ಹಾಗೂ ಅತ್ಯಂತ ಕಡಿಮೆ ಸಂಬಳವನ್ನು ನೀಡುತ್ತಿದ್ದಾರೆ. ಕನಿಷ್ಠ ವೇತನವನ್ನು ನೀಡದೆ ಇರುವುದರಿಂದ ಸಫಾಯಿ ಕರ್ಮಚಾರಿ / ಕಾರ್ಮಿಕ ಇಲಾಖೆ ಯವರು ವಿಶ್ವವಿದ್ಯಾನಿಲಯಕ್ಕೆ ನೋಟೀಸ್ ನೀಡಿದಾಗ ವಿಶ್ವವಿದ್ಯಾನಿಲಯದ ಜವಾಬ್ದಾರಿಯಾಗಿರುತ್ತದೆ ಮತ್ತು ಸಿಂಡಿಕೇಟ್ ಏನು ಮಾಡಲು ಸಾಧ್ಯವಿರುವುದಿಲ್ಲ. ಆದುದರಿಂದ Service provider ರನ್ನು ತೆಗೆದು ಸ್ವಚ್ಛತಾ ಕಾರ್ಯ ನಿರ್ವಹಿಸುವವರಿಗೆ ವಿಶ್ವವಿದ್ಯಾನಿಲಯದಿಂದ ನೇರವಾಗಿ ಸಂಬಳ ಸಂದಾಯ ಮಾಡಲು ಅನುಮತಿ ಕೋರಿದರು.

ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪ ನವರು, ಮಾರ್ಚ್ ಮುಗಿಯುವವರೆಗೆ ಇರುವವರನ್ನೇ ಮುಂದುವರೆಸಿ ಮಾರ್ಚ್ ನಂತರ ಟೆಂಡರ್ ಪ್ರಕ್ರಿಯೆಯಲ್ಲಿ ಯಾವ ಬಿಡ್‌ದಾರರು L1 ಆಗಿ ವಿಶ್ವವಿದ್ಯಾನಿಲಯ ನಿಗದಿ ಪಡಿಸಿರುವ ನಿಯಮಾವಳಿಗಳನ್ನು ಪೂರೈಸಿದಂತಹ ಬಿಡ್‌ದಾರರಿಂದ ಸೇವೆಯನ್ನು ಪಡೆಯಬಹುದು ಎಂದು ಅಭಿಪ್ರಾಯ ಪಟ್ಟರು. ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ವಿಶ್ವವಿದ್ಯಾನಿಲಯದಿಂದ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವವರಿಗೆ ನೇರವಾಗಿ ಸಂಬಳ ಕೊಡುವುದು ತಪ್ಪಾಗುತ್ತದೆ ಎಂದರು.

ಇದಕ್ಕೆ ಸಂಬಂಧಿಸಿದಂತೆ, ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ರವರು, 90 ದಿನಗಳ ಟೆಂಡರ್ ಅವಧಿ ಮುಗಿದಿದೆ, Excluding material ಎಂದು quote ಮಾಡಿದ್ದಾರೆ, ರೂ. 5.00 ಲಕ್ಷ ಅಂದಾಜು ವೆಚ್ಚ ತಗುಲಬಹುದು, Registered Company, Insurance, PF ಕೊಡುತ್ತಿದ್ದಾನೆ ಎಂದರು.

ಸದಸ್ಯರಾದ ಡಾ: ಆರ್. ಕೆ. ಚಂದ್ರನಾಥ್ ರವರು, Retender ಮಾಡಿ ಮತ್ತು ಈಗ ಇರುವವರನ್ನೇ ಸದ್ಯಕ್ಕೆ ಮುಂದುವರೆಸಿ ಟೆಂಡರ್ ಪ್ರಕ್ರಿಯೆಯನ್ನು ನಿಯಮಾವಳಿಗಳಂತೆ ನಡೆಸಿ, L1 ಆದ ಬಿಡ್‌ದಾರರ ಸೇವೆಯನ್ನು ಪಡೆಯಲು ತಿಳಿಸಿದರು.

ಹಾಗೂ ಇದಕ್ಕೆ ಸಂಬಂಧಿತವಾಗಿ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಮುಂಜಾಗ್ರತೆಯಾಗಿ ವಾಸ್ತವಿಕತೆಯ ಬಗ್ಗೆ ಒಂದು ಪತ್ರವನ್ನು ಸಫಾಯಿ ಕರ್ಮಚಾರಿರವರಿಗೆ ಕಳುಹಿಸಲು ಸೂಚಿಸಿದರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು, ಒಂದು ವರ್ಷದಿಂದ ಈ ಟೆಂಡರ್ ಪ್ರಕ್ರಿಯೆ ಮಾಡುತ್ತಲೇ ಇದ್ದರೂ ಇದುವರೆವಿಗೂ ಯಾವುದೇ ಸರಿಯಾದ ನಿರ್ಣಯ ತೆಗೆದುಕೊಳ್ಳಲು ಆಗದೆ ಇರುವುದರಿಂದ 2 ತಿಂಗಳ ಅವಧಿಯಲ್ಲಿ ಏನೂ ಆಗುವುದಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟರು. ಈ ಟೆಂಡರ್ ಮಾಡಿ 2 ತಿಂಗಳ ಒಳಗೆL1 ಬಿಡ್‌ದಾರರನ್ನು ಗುರುತಿಸಲು ಹೇಳಿದರು ಮತ್ತು Short term tender ಅವಕಾಶ ಇದ್ದಲ್ಲಿ ಮಾತ್ರ Short term tender ಮಾಡಲು ತಿಳಿಸಿದರು. ಬೆಂಗಳೂರು ವಿಶ್ವವಿದ್ಯಾಲಯದಿಂದ 1 year contract ಇದ್ದರೆ, ಹಿಂದಿನ ಕುಲಸಚಿವರು ಪಿ.ಎಫ್ ಪರಿಶೀಲನೆ ಮಾಡಿ acknowledgement ಇದ್ದರೆ payment ಮಾಡಿ. ಮಾರ್ಚ್ ತಿಂಗಳ payment ಮಾಡುವ ಮುಂಚೆ ಒಂದು ನೋಟಿಸ್ ನೀಡಿ. PFನ ವಿವರಗಳನ್ನು ಪಡೆದು, ಸರಿ ಎಂದು ಕಂಡು ಬಂದಲ್ಲಿ ಅವರಿಂದ ಸೇವೆ ಪಡೆದಿರುವುದಕ್ಕೆ ಸಂದಾಯ ಮಾಡಲು ಹೇಳಿದರು. ಈ ಎಲ್ಲಾ ವಿಷಯಗಳೊಂದಿಗೆ ಸಿಂಡಿಕೇಟ್ ಸಭೆಯ ಚರ್ಚೆಗೆ ಮಂಡಿಸಲು ತಿಳಿಸಿದರು. Legal notice issue ಮಾಡಲು ಸಹ ಹೇಳಿದರು.

ಸದಸ್ಯರಾದ ಶ್ರೀ ಹೆಚ್. ಟಿ. ಅರವಿಂದ್ ರವರು ಮಾತನಾಡಿ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯನವರು ಕೇಂದ್ರೀಯ ಖರೀದಿ ಸಮಿತಿಯ ಸದಸ್ಯರು ಆಗಿರುವುದರಿಂದ ಆ ಸಭೆಯಲ್ಲಿಯೇ Dissent note ಕೊಡಬಹುದಿತ್ತು, ಅಲ್ಲಿ ಅನುಮೋದಿಸಿ ಇಲ್ಲಿ ವಿಷಯವನ್ನು ಬೇರೆ ಕಡೆಗೆ ಸೆಳೆಯುತ್ತಿದ್ದಾರೆ, ಸ್ಪಷ್ಟತೆ ಅಲ್ಲಿ record ಮಾಡಬೇಕಿತ್ತು, ಅದು ಬಿಟ್ಟು ಅಲ್ಲಿ ಒಂದು ಮಾತು ಇಲ್ಲಿ ಒಂದು ಮಾತು ಆಡುತ್ತಿದ್ದಾರೆ, ಇದನ್ನು High light ಮಾಡಿ, Statutory ಸಭೆಯಲ್ಲಿ ತೀರ್ಮಾನವನ್ನು ಸರಿಯಾಗಿ ರೆಕಾರ್ಡ್ ಮಾಡಿಸಿ ಎಂದು ಸೂಚಿಸಿದರು. 2 ವರ್ಷದಿಂದ ಮಣಿವಣ್ಣ ರವರ Workforce compell ಆಗಿ ತೆಗೆದುಕೊಳ್ಳಬಾರದು. 4 ಬಾರಿ ಆಗಿರುವ ತಪ್ಪುಗಳನ್ನು rectify ಮಾಡಿಕೊಂಡು ನಿಯಮಗಳಂತೆ ಕಾನೂನು ಉಲ್ಲಂಘನೆ ಮಾಡದೆ ಕ್ರಮ ಜರುಗಿಸ ಬಹುದಾಗಿದ್ದರೆ ಮುಂದಿನ ಕ್ರಮ ಜರುಗಿಸಬಹುದು ಎಂದರು.

ಕುಲಸಚಿವರು ತಿದ್ದುಪಡಿ ಮಾಡಿಕೊಳ್ಳಬಹುದು ಎಂದು ಸೂಚಿಸಿದರು.

**ಸಿಂಡಿಕೇಟ್ ನಿರ್ಣಯ:**

**ಸುದೀರ್ಘ ಚರ್ಚೆಯ ನಂತರ 2 ತಿಂಗಳ ಒಳಗೆ ಈ ಟೆಂಡರ್ ಪ್ರಕ್ರಿಯೆಯನ್ನು ಪೂರ್ತಿ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ಅಲ್ಲಿಯವರೆವಿಗೂ ಈಗ ಇರುವವರಿಂದಲೆ ಸ್ವಚ್ಛತಾ**

ಕಾರ್ಯವನ್ನು ನಿರ್ವಹಿಸಿಕೊಳ್ಳಲು ಅನುಮತಿಸಿತು. ಸ್ವಚ್ಚತಾ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯೊಂದಿಗೆ ಸಂಪೂರ್ಣ ದಾಖಲೆ ಪರಿಶೀಲಿಸಲು ನಿರ್ಣಯಿಸಿತು.

ವಿಷಯ ಸಂಖ್ಯೆ:-II ಇ ಪ್ರಕ್ಯೂರ್‌ಮೆಂಟ್ ಮುಖೇನ ಹೊರಗುತ್ತಿಗೆ ಸಿಬ್ಬಂದಿಗಳ ನೇಮಕಾತಿಗಾಗಿ ಕರೆಯಲಾದ ತಾಂತ್ರಿಕ /ಆರ್ಥಿಕ ಬಿಡ್‌ಗಳ ಪರಶೀಲನೆ ಹಾಗೂ ಅರ್ಹ ಬಿಡ್ ದಾರರ ಅನುಮೋದನೆ ಕುರಿತು.

ಸಿಂಡಿಕೇಟ್ ನಿರ್ಣಯ:

ಸಭೆಯು ಸರ್ವಾನುಮತದಿಂದ ಕೇಂದ್ರೀಯ ಖರೀದಿ ಸಮಿತಿಯ ನಿರ್ಣಯದಂತೆ ಹೊಸದಾಗಿ ಟೆಂಡರ್ ಕರೆಯಲು ತೀರ್ಮಾನಿಸಿತು ಮತ್ತು ಹೊರಗುತ್ತಿಗೆ ನೌಕರರು **skilled labourer** ಆಗಿರುವುದರಿಂದ ಅವರ ಸೇವೆಯನ್ನು ಪಡೆಯುವ ಮುನ್ನ ವಿಶ್ವವಿದ್ಯಾನಿಲಯದಿಂದ ಅವರ ಕೆಲಸದ ಗುಣಮಟ್ಟದ ಬಗ್ಗೆ ಒಂದು ಪರೀಕ್ಷೆ ಲಿಖಿತ/ಮೌಖಿಕ ನಡೆಸಿ ನಂತರ ಅವರ ಸೇವೆಯನ್ನು ಪಡೆಯಬಹುದು. ಹಾಗೂ ಈಗಾಗಲೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರು ಸಹ ಅವರ ಮುಖಾಂತರ ಬರಬಹುದು ಎಂದು ತಿಳಿಸಬಹುದು ಎಂದು ಸೂಚಿಸಲು ನಿರ್ಣಯಿಸಿತು.

ವಿಷಯ ಸಂಖ್ಯೆ:-III ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಟೆಂಡರ್ ಮೂಲಕ ಖರೀದಿಸುವ ಬಗ್ಗೆ.

ಕುಲಸಚಿವರು(ಮೌಲ್ಯಮಾಪನ) ರವರು Logysis ರವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ 2,00,000 ಲಕ್ಷ ಅಂಕಪಟ್ಟಿಗಳನ್ನು ತಯಾರಿಸಿ ಕೊಟ್ಟಿದ್ದರು. ಹಾಗೂ ಈ ಅಂಕಪಟ್ಟಿಗಳ ಸರಬರಾಜು ವೆಚ್ಚವನ್ನು ವಿಶ್ವವಿದ್ಯಾನಿಲಯದಿಂದ ಪಡೆದಿರುವುದಿಲ್ಲ. ಈ 2,00,000 ಲಕ್ಷ ಅಂಕಪಟ್ಟಿಗಳಲ್ಲಿ 1,00,000 ಲಕ್ಷ ಅಂಕ ಪಟ್ಟಿಗಳನ್ನು ಮುದ್ರಣ ಮಾಡಿ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ಉಳಿದ 1,00,000 ಲಕ್ಷ ಅಂಕಪಟ್ಟಿಗಳು ಕೇಂದ್ರ ವಿಶ್ವವಿದ್ಯಾಲಯದ ಹೆಸರಿನಲ್ಲಿ ವಿತರಿಸಲು ಕಡಿಮೆ ಬರುತ್ತಿರುವುದರಿಂದ ಮತ್ತು ಈಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಂದು ಮರು ನೇಮಕ ಗೊಂಡಿರುವ ಕಾರಣ ಆಯಾಯ ವರ್ಷಗಳಿಗೆ ಸಂಬಂಧಿಸಿದಂತೆ ಅಂಕಪಟ್ಟಿಗಳನ್ನು ನೀಡಬೇಕಾಗಿರುತ್ತದೆ. ಸ್ನಾತಕ, ಸ್ನಾತಕೋತ್ತರ, ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಬೇಕಾಗುವ ಅಂಕಪಟ್ಟಿಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲೇ ಮುದ್ರಣ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದು ವಿವರಿಸಿದರು.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು, Logysis ರವರು ನೀಡಿರುವ ಅಂಕಪಟ್ಟಿಗಳ ದರ ಅವರಿಗೆ ನೀಡುವ ವೆಚ್ಚದಲ್ಲಿ ಸೇರ್ಪಡೆ ಆಗಿರಬಹುದು ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಉಚಿತವಾಗಿ ಅಂಕಪಟ್ಟಿಗಳನ್ನು Logysis ರವರು ನೀಡಿದ್ದರೆ ಹಾಗೂ ವಿಶ್ವವಿದ್ಯಾನಿಲಯವು ಉಚಿತವಾಗಿ ಪಡೆಯುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

ಸಿಂಡಿಕೇಟ್ ಸಭೆಯು ಕೇಂದ್ರೀಯ ಖರೀದಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಸರ್ವಾನುಮತದಿಂದ ಅನುಮೋದಿಸಿತು.

1. ಅಂಕಪಟ್ಟಿ **(Marks Card)** ಒಂದು ವರ್ಷಕ್ಕೆ **2,25,000** ಸಂಖ್ಯೆ(**2,25,000 X** ಅಂದಾಜು ರೂ.**20/-** ರಂತೆ = ರೂ.**45,00,000/-**.

2. ಪದವಿ ಪ್ರಮಾಣ ಪತ್ರಗಳು( Degree Certificate) ಒಂದು ವರ್ಷಕ್ಕೆ 35,000 ಸಂಖ್ಯೆ ಇವುಗಳ ಅಗತ್ಯತೆ ಇರುವುದರಿಂದ (35,000 X ಅಂದಾಜು ರೂ.25/- ರಂತೆ = ರೂ.8,75,000/-.

ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳ ಸರಬರಾಜಿಗಾಗಿ ತಗಲುವ ಅಂದಾಜು ವೆಚ್ಚ ರೂ.53.75 ಲಕ್ಷಗಳಲ್ಲಿ ಟೆಂಡರ್ ಮುಖೇನ ಖರೀದಿಸಲು ತೀರ್ಮಾನಿಸಿ ಸಭೆಯು ಅನುಮೋದನೆ ನೀಡಿತು.

**ವಿಷಯ ಸಂಖ್ಯೆ:- 2 ಭೌತಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮಂಡಳಿ ಪುನರ್ ರಚಿಸುವ ಕುರಿತು.**

ಸಭಾಧ್ಯಕ್ಷರು ಮಾತನಾಡಿ ಡಾ:ಎನ್. ನಾಗಯ್ಯ, ಭೌತಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ರವರು ಕಾರಣಾಂತರಗಳಿಂದ ಭೌತಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ, ವಿಜ್ಞಾನ ನಿಖಾಯದ ಡೀನರು ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸಲು ನಿಯಾಮಾವಳಿಗಳಂತೆ ಅಧ್ಯಯನ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿ ಭೌತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸಲು ಅನುಮತಿಯನ್ನು ಕೋರಿದರು.

| | |
|---|---|
| 1. | **Chairman**<br>Prof. Eraiah , Department of Physics, Bangalore University |
| 2. | **Members**:<br>Prof. Jayamma, Department of Physics<br>Kuvempu University, Shankaraghatta, Shimoga |
| 3. | Prof.H. Nagabhushana, Department of Physics<br>Tumkur University, Tumkur |
| 4. | Prof. Krishnaveni, Department of Physics<br>Mysore University, Manasagangothri, Mysore |
| 5. | Prof. Satish, Department of Physics<br>Govt. Science College,Nrupathunga Road,Bengaluru |
| 6. | **Co-opted Members**:<br>Dr.J. Anil Kumar,<br>Kamaljeeth Instrumentation & Service Unit, No.610, 5th Main, 8th Cross, JRD Tata Nagar, Bengaluru – 560 092 |
| 7. | Prof.B. Rudraswamy, Co-ordinator,<br>Department of Physics,BCU. |

**ಸಿಂಡಿಕೇಟ್ ನಿರ್ಣಯ:**

ಸಭೆಯು ಸರ್ವಾನುಮತದಿಂದ ಭೌತಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಪುನರ್ ರಚನೆಯ ಪ್ರಸ್ತಾವನೆಯನ್ನು ಅನುಮೋದಿಸಿತು.

**ವಿಷಯ ಸಂಖ್ಯೆ:- 3 ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಶೈಕ್ಷಣಿಕ ಸಾಲಿಗೆ ಆಯಾ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಪರೀಕ್ಷಾ ಮಂಡಳಿಗಳನ್ನು (BoE) ಅನುಮೋದಿಸುವ ಕುರಿತು**

ಈ ವಿಷಯದ ಬಗ್ಗೆ ಕುಲಸಚಿವರು (ಮೌಲ್ಯಮಾಪನ) ರವರು ಮಾತನಾಡಿ ಪ್ರತಿವರ್ಷ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ರಂತೆ 2020-2021 ನೇ ಸಾಲಿಗೆ ಆಯಾಯ ವಿಷಯಗಳ ಅರ್ಹ ಪರೀಕ್ಷಕರ ಪಟ್ಟಿಯನ್ನು ಅಧ್ಯಯನ ಮಂಡಳಿಯ ಅಧ್ಯಕ್ಷರಿಂದ ಪಡೆದು Board for Appointment of Examiners (BoAE) ನಲ್ಲಿ ಮಂಡಿಸಲಾಗಿದೆ. ಈ ಸಮಿತಿಯಲ್ಲಿ ಕುಲಪತಿಗಳು, ಡೀನ್‌ಗಳು, ಕುಲಸಚಿವರು(ಮೌಲ್ಯಮಾಪನ) ಇರುತ್ತಾರೆ ಹಾಗೂ ಈ ವಿಷಯದ ಬಗ್ಗೆ ವಿಷಯವಾರುಗಳಿಗೆ ಹೊರಗಿನ ಮತ್ತು ಒಳಗಿನ ಅರ್ಹ ಪರೀಕ್ಷಕರ ಹೆಸರುಗಳನ್ನು (internal & external) ಸೂಚಿಸಲಾಗಿದೆ. UG, PG, Ph.D ವಿಷಯಗಳಿಗೆ ಸಂಬಂಧಿಸಿದಂತೆ ಮಂಡಳಿಗಳನ್ನು ರಚಿಸಲಾಗಿದೆ. ಈ ಮಂಡಳಿಗಳನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ಆರ್. ಕೆ. ಚಂದ್ರನಾಥ್ ರವರು UG Diploma, PG Diploma ಅಧ್ಯಯನ ಮಂಡಳಿಗಳನ್ನು ಇನ್ನು ರಚಿಸಿರುವುದಿಲ್ಲರುವ ಬಗ್ಗೆ ಪ್ರಶ್ನಿಸಿದರು.

ಕುಲಸಚಿವರು(ಮೌಲ್ಯಮಾಪನ) ರವರು ಸ್ನಾತಕ ಅಧ್ಯಯನ ಮಂಡಳಿ – UG Diploma, ಸ್ನಾತಕೋತ್ತರ ಅಧ್ಯಯನ ಮಂಡಳಿ – PG Diploma ಕೋರ್ಸುಗಳಿಗೂ ಸಹ ಅನ್ವಯಿಸುತ್ತವೆ ಆದುದರಿಂದ ಬೇರೆ ಅಧ್ಯಯನ ಮಂಡಳಿಗಳನ್ನು ರಚಿಸಿರುವುದಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಪ್ರೊ. ಕನ್ನಹಳ್ಳಿ –always strucks in the train ಆದರೆ ಪ್ರತಿ ಭಾರಿಯೂ ಅವರಿಗೆ TA/DA ಸಂದಾಯವಾಗಿರುತ್ತದೆ. ಆದುದರಿಂದ ಅವರ ಹೆಸರನ್ನು ಈ ಪಟ್ಟಿಯಿಂದ ಕೈ ಬಿಡಬೇಕೆಂದು ಸೂಚಿಸಿದರು. Viva-voce ಗೆ ಯಾವುದಾದರೂ ಶುಲ್ಕವನ್ನು ನಿಗದಿ ಪಡಿಸಲಾಗಿದೆಯೇ ಎಂದು ಕೇಳಿದರು. ಹೊರಗಿನಿಂದ ಬಂದ ಪರೀಕ್ಷಕರು Viva ಗೆ ಶುಲ್ಕವನ್ನು ಸಂಬಂಧಪಟ್ಟ ಕಾಲೇಜಿನವರಿಂದ ಕೇಳಿ ಪಡೆಯುತ್ತಿದ್ದಾರೆ ಎಂದು ಅವರ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ಕುಲಸಚಿವರು (ಮೌಲ್ಯಮಾಪನ) ರವರು, ಈ ವಿಷಯ ಅವರ ಗಮನಕ್ಕೆ ಬಂದ ತಕ್ಷಣವೇ ಒಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಹೊರಗಿನಿಂದ ಬಂದ ಪರೀಕ್ಷಕರಿಗೆ TA/DA ಯನ್ನು ವಿಶ್ವವಿದ್ಯಾನಿಲಯ ಭರಿಸುತ್ತದೆ. ಆದುದರಿಂದ ಅವರುಗಳಿಗೆ ಯಾವುದೇ ಹಣವನ್ನು ನೀಡಬೇಕಾಗಿಲ್ಲವೆಂದು ಮತ್ತು ಅವರಿಗೆ ನಿಯಮಾನುಸಾರ ನೀಡಬಹುದಾದ ಸಂಭಾವನೆಗೆ ಸಂಬಂಧಿಸಿದಂತೆ ಆಯಾಯ ಕಾಲೇಜುಗಳಿಂದ ಧೃಢೀಕೃತ ಬಿಲ್ಲುಗಳನ್ನು ಸಲ್ಲಿಸಲು ಸೂಚಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ಟಿ .ಹೆಚ್. ಶ್ರೀನಿವಾಸಯ್ಯ ರವರು rotation ಅನುಸರಿಸಿ ಅಧ್ಯಯನ ಮಂಡಳಿಯನ್ನು ರಚಿಸಲು ತಿಳಿಸಿದರು ಮತ್ತು ತುಂಬಾ ದೂರದಿಂದ ಬರುವವರನ್ನು ಅಧ್ಯಯನ ಮಂಡಳಿಯಲ್ಲಿ ಸೇರಿಸದೆ ಇರುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಆದಷ್ಟೂ ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ ಪರೀಕ್ಷಕರ ಸೇವೆ ಪಡೆಯಬಹುದು ಎಂದು ಸೂಚಿಸಿದರು.

ಸದಸ್ಯರಾದ ಪ್ರೊ. ಕೆ. ರಮೇಶ್ ರವರು ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳಿಂದ ಪರೀಕ್ಷಕರನ್ನು ಮಂಡಳಿಗಳಿಗೆ ಸೇರಿಸಲು ಸೂಚಿಸಿದರು.

ಸಭಾಧ್ಯಕ್ಷರು ಮಾತನಾಡುತ್ತಾ, ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳು, ಈ ವಿಷಯವನ್ನು, ಡೀನರ ಜೊತೆಗೂಡಿ ಪರೀಕ್ಷಕರ ಪಟ್ಟಿ ತಯಾರಿಸಿ ನೀಡುತ್ತಾರೆ ಆದುದರಿಂದ ವಿಶ್ವವಿದ್ಯಾನಿಲಯವು ಯಾರದೇ ಹೆಸರನ್ನು ಈ ಪಟ್ಟಿಗಳಲ್ಲಿ ಸೇರಿಸಲು ಅವಕಾಶ ಇರುವುದಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ, Speech & Hearing ಅಧ್ಯಯನ ಮಂಡಳಿಗೆ ಡಾ: ಚಂದ್ರಶೇಖರ್ ರವರನ್ನು ಸೇರಿಸಲು ತಿಳಿಸಿ ಅವರ ಕಾಲೇಜು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಸೇರಿರುತ್ತದೆ ಎಂದು ಸಹ ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**2020-21 ನೇ ಶೈಕ್ಷಣಿಕ ಸಾಲಿಗೆ ಆಯಾ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಪರೀಕ್ಷಾ ಮಂಡಳಿಗಳನ್ನು (BoE) ಸಭೆ ಅನುಮೋದಿಸಿತು.**

**ವಿಷಯ ಸಂಖ್ಯೆ:- 4 Application of Presidency College for getting Autonomous Status under Section 2(F) of UGC Act 1956**

ಅಧ್ಯಕ್ಷರು, Presidency College ಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಧನಸಹಾಯ ಆಯೋಗವು(UGC) 2021-22 ನೇ ಸಾಲಿನಿಂದ 29-30 ನೇ ಸಾಲಿನ ವರೆವಿಗೂ Autonomous Status ನ್ನು ನೀಡಿದೆ. ಆದುದರಿಂದ ವಿಶ್ವವಿದ್ಯಾನಿಲಯದಿಂದ ಅವರಿಗೆ Autonomous ಆದೇಶ ಹೊರಡಿಸುವ ಮುನ್ನ ಒಂದು ಸಮಿತಿಯಿಂದ ಭೇಟಿ ಮಾಡಿಸಿ ವರದಿಯನ್ನು ಪಡೆಯಬೇಕಾಗಿರುತ್ತದೆ. ಹಾಗಾಗಿ ಒಂದು ಸಮಿತಿಯನ್ನು ರಚಿಸಲು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಈ ವಿಷಯವನ್ನು ಮಂಡಿಸಲಾಗಿದೆ ಎಂದು ವಿವರಣೆ ನೀಡಿದರು.

ಸದಸ್ಯರಾದ ಶ್ರೀ ಹರಿಪ್ರಸಾದ್ ರವರು, KSU Act Section 64 ರಂತೆ ಒಂದು ಸಮಿತಿಯನ್ನು ರಚಿಸಿ ವರದಿಯನ್ನು ಪಡೆಯಬೇಕಾಗಿರುತ್ತದೆ. ಪ್ರತಿ ವರ್ಷ ಸಂಯೋಜನಾ ನವೀಕರಣಕ್ಕೆ ಸಮಿತಿ ಭೇಟಿ ನೀಡಬೇಕು ಎಂದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು, UGC 2018 ರ ನಿಯಮಾವಳಿಗಳಂತೆ ಯಾವುದೇ ಸಮಿತಿಯು ಭೇಟಿ ನೀಡಲು ಅವಕಾಶ ಇರುವುದಿಲ್ಲ. ಯಾವ ಕಾರಣದ ಮೇಲೆ ಭೇಟಿ ನೀಡಬಹುದು ಎಂದು ಮೊದಲು ತೀರ್ಮಾನಿಸಬೇಕಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು. ಸದಸ್ಯರಾದ ಶ್ರೀ ಆರ್. ಕೆ. ಚಂದ್ರನಾಥ್ ರವರು, ಒಂದು ಸ್ಥಾಯಿ ಸಮಿತಿ ಭೇಟಿ ನೀಡಬಹುದು ಎಂದರು.

ಕುಲಸಚಿವರು (ಮೌಲ್ಯಮಾಪನ), Statute is very clear. There is no need of resolution.

ಸದಸ್ಯರಾದ ಶ್ರೀ ಕರಣ್‌ಕುಮಾರ್, ಯಾವಾಗ ಯಾವ ವಿಷಯದ ಬಗ್ಗೆ ನಿಯಮಾವಳಿಗಳಲ್ಲಿ ಯಾವುದೇ ಪ್ರಸ್ತಾಪ ಇರುವುದಿಲ್ಲವೋ, ಆಗ ವಿಶ್ವವಿದ್ಯಾನಿಲಯ ಸೂಕ್ತವಾದ ನಿಯಮಗಳನ್ನು ಅಳವಡಿಸಿಕೊಳ್ಳಬಹುದೆಂದು ಎಂದು ಸೂಚಿಸಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು, ಯು.ಜಿ.ಸಿಗೆ ಅರ್ಜಿಯನ್ನು ವಿಶ್ವವಿದ್ಯಾಲಯದಿಂದ ಕಳುಹಿಸುವ ಮುನ್ನ, ವಿಶ್ವವಿದ್ಯಾಲಯದ ಕಡೆಯಿಂದ ಒಂದು ಸಮಿತಿಯನ್ನು ರಚಿಸಿ, ಭೇಟಿ

ನೀಡಿ, ವರದಿ ಪಡೆದು ನಂತರ ಮುಂದಿನ ಕ್ರಮ ಜರುಗಿಸಬೇಕಿತ್ತು. NAAC A Grade ಪಡೆದಿದ್ದರೆ ಕಾಲೇಜಿನವರು autonomous Status ಪಡೆಯಲು ಅರ್ಹ ಆಗಿರುತ್ತಾರೆ.

ಸದಸ್ಯರಾದ ಶ್ರೀ ಕರಣ್‌ಕುಮಾರ್, ಆಯಾಯ ವಿಶ್ವವಿದ್ಯಾನಿಲಯ ಮೂಲಭೂತ ಪರಿನಿಯಮಗಳನ್ನು ಮಾಡಿಕೊಳ್ಳಬಹುದು. ಆದರೆ ಕೊನೆಗೆ ಪದವಿಯನ್ನು ನೀಡುವುದು ವಿಶ್ವವಿದ್ಯಾನಿಲಯ. BCU ಹೆಸರಿನಲ್ಲಿ ಹುಡುಗರನ್ನು ತುಂಬುತ್ತಾರೆ. ಹತ್ತು ವರ್ಷಗಳ ಸುಧೀರ್ಘ ಅವಧಿಯಲ್ಲಿ ಅವರು ಏನು ಬೇಕಾದರೂ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ರವರು, ವಿದ್ಯಾರ್ಥಿ ಪ್ರವೇಶ ಪ್ರಮಾಣದ ಬಗ್ಗೆ ಅವರಿಗೆ ಯಾವುದೇ ನಿರ್ಬಂಧನೆ ಇರುವುದಿಲ್ಲ. ಸಂಯೋಜನೆಗೊಂಡ ಕಾಲೇಜುಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿಲ್ಲ. ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಹೊಂದುತ್ತಿದ್ದಾರೆ. ಖಾಸಗಿ ವಿಶ್ವವಿದ್ಯಾನಿಲಯಕ್ಕೆ ಏಕೆ Autonomous Status ನ್ನು ನೀಡಬೇಕು. ಈ ಸಂಸ್ಥೆಯ ಶಾಖೆಗಳು ಸುಮಾರು ಕಡೆ ಇರುತ್ತವೆ. Jain College, Jain University, Private University ಅಂತಹ ಸಂಸ್ಥೆಗಳಿಗೆ autonomous status ನೀಡಿದರೆ ಪರೀಕ್ಷೆಯಲ್ಲಿ ದುರುಪಯೋಗ ಆಗುತ್ತದೆ ಎಂದರು.

ಕುಲಸಚಿವರು (ಮೌಲ್ಯಮಾಪನ), pendrive ನಲ್ಲಿ ತರುವ ವಿಷಯಕ್ಕೆ ಡಿಗ್ರಿ ಕೊಟ್ಟಂತೆ ಆಗುತ್ತದೆ. ಯಾವುದೇ ವಿಷಯ ಸಮೂಹಕ್ಕೆ ಎಷ್ಟು ಬೇಕಾದರೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವರಿ ಆಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್, ಒಂದು ಪತ್ರವನ್ನು ಕಾಲೇಜಿನವರಿಗೆ ಬರೆಯಬಹುದು ಎಂದು ಸೂಚಿಸಿದರು.

ಸಿಂಡಿಕೇಟ್ ನಿರ್ಣಯ:

ಈ ವಿಷಯವನ್ನು ಮುಂದೂಡಿ ಮುಂದಿನ ಸಾಮಾನ್ಯ ಸಭೆಗೆ ಎಲ್ಲಾ ಅಡಕಗಳನ್ನು ಒಳಗೊಂಡಂತೆ ಪೂರ್ಣ ವಿವರಗಳೊಂದಿಗೆ ಮರು ಮಂಡಿಸಲು ನಿರ್ಣಯಿಸಿತು.

**Table Agenda: (1) Proceedings of the 5th Works Committee meeting held on 18.01.2021.**

ಸಿಂಡಿಕೇಟ್ ನಿರ್ಣಯ:

**Deferred and to be placed in the regular meeting.**

**TableAgenda: (2)** ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕ / ಸಹ-ಪ್ರಾಧ್ಯಾಪಕರು ಮಾತೃ ವಿಶ್ವವಿದ್ಯಾಲಯಕ್ಕೆ ಹಿಂದಿರುಗುವ ಇಚ್ಚೆ ಹೊಂದಿ ಸಲ್ಲಿಸಿರುವ ಮನವಿಗಳ ಬಗ್ಗೆ.

ಸಿಂಡಿಕೇಟ್ ನಿರ್ಣಯ:

**Deferred and to be placed in the regular meeting**

**Table Agenda: (3)** ಶ್ರೀ ಬಿ. ವೆಂಕಟೇಶ್, ಬೆಂಗಳೂರು ವಿಶ್ವವಿದ್ಯಾಲಯ ನಿವೃತ್ತ ನೌಕರರಾದ ಇವರನ್ನು ಸಮಾಲೋಚಕರಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ.

ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡಿ ಈಗಾಗಲೆ ಹಿಂದಿನ ಸಭೆಯಲ್ಲಿ 4+1 ನಿವೃತ್ತ ನೌಕರರ ಸೇವೆ ಪಡೆಯಲು ಅನುಮತಿಸಿ ಸ್ಥಾಯಿ ಸಮಿತಿಗೆ ಅವರ ಅರ್ಜಿಗಳನ್ನು ಕಳುಹಿಸಲಾಗಿದೆ. ಹಾಗೂ ಸ್ಥಾಯಿ ಸಮಿತಿಯ ಶಿಫಾರಸ್ಸಿನ ಮೇಲೆ ಕ್ರಮ ಜರುಗಿಸಬಹುದು ಎಂದರು ಮತ್ತು ಈ ವ್ಯಕ್ತಿಯ ಅರ್ಜಿಯ ಬಗ್ಗೆ ಅಂದು ನಡೆದ ಸಭೆಯಲ್ಲಿ ಪ್ರಸ್ತಾವನೆ ಇರಲಿಲ್ಲ ಎಂದರು.

ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪ ನವರು ಶ್ರೀ ಬಿ. ವೆಂಕಟೇಶ್ ರವರ ಸೇವೆಯನ್ನು ಪಡೆಯುವುದು ಬೇಡವೇ ಬೇಡ ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು, 7 ಅರ್ಜಿಗಳಲ್ಲಿ 4 ಅರ್ಜಿಗಳನ್ನು ಪರಿಗಣಿಸಲಾಗಿದೆ. ಅವಶ್ಯಕತೆ ಇದ್ದಾಗ ತೆಗೆದುಕೊಳ್ಳಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಹರಿಪ್ರಸಾದ್ ರವರು, 6 ಜನರ ಹೆಸರುಗಳನ್ನು ಸೇರಿಸಿ ವಿಷಯವನ್ನು ಮತ್ತೊಮ್ಮೆ ಸಭೆಗೆ ತನ್ನಿ ಮತ್ತು ಸ್ಥಾಯಿ ಸಮಿತಿಯ ವರದಿಯನ್ನು ಸಹ ಮಂಡಿಸಿ ನಂತರ ಸೂಕ್ತ ನಿರ್ಣಯ ತೆಗೆದುಕೊಳ್ಳಬಹುದು ಎಂದು ಸೂಚಿಸಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್, ಸ್ಥಾಯಿ ಸಮಿತಿಯ ನಡಾವಳಿಗಳಲ್ಲಿ ಅಧ್ಯಕ್ಷರ ಸಹಿ ಮಾತ್ರ ಇದೆ. ಸಹಿಯ ಮುಂದೆ ದಿನಾಂಕ ಇರುವುದಿಲ್ಲ ಹಾಗೂ ಎಲ್ಲಾ ಸಮಿತಿಯ ಸದಸ್ಯರ ಸಹಿ ಸಹ ಇರುವುದಿಲ್ಲ.

ಸದಸ್ಯರಾದ ಶ್ರೀ ಹರಿಪ್ರಸಾದ್, ಅವಶ್ಯಕತೆ ಇದ್ದಾಗ ಅರ್ಜಿಗಳನ್ನು ಕರೆದು ಅವರ ಸೇವೆ ಪಡೆಯಬಹುದು ಬೇರೆ ಬೇರೆ ಕಡೆಯಲ್ಲಿ ನಿವೃತ್ತಿ ಹೊಂದಿರುವವರು ಸಹ ಅರ್ಜಿ ಸಲ್ಲಿಸಲಿ ಎಂದರು.

ಸದಸ್ಯರಾದ ಶ್ರೀ ಹೆಚ್. ಟಿ. ಅರವಿಂದ್ ರವರು ಮಾತನಾಡುತ್ತಾ ಈ ವಿಷಯದ ಬಗ್ಗೆ, ಯಾವುದೇ ನಿರ್ಣಯ ಮಾಡುವ ಮುನ್ನ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿ ಈ ವಿವರಗಳನ್ನು ನೀಡ ಬಯಸುತ್ತೇನೆ ಎಂದರು. ಸ್ಥಾಯಿ ಸಮಿತಿ ರಚಿಸಿದ ದಿನದಿಂದೆ, ಈ ಸಮಿತಿಯ ಸಭೆಯ ದಿನಾಂಕವನ್ನು ಸೂಚಿಸಿದ್ದುದರಿಂದ, ಸಭೆಯನ್ನು ನಡೆಸಲಾಗುವುದು ಎಂದು ಸಭಾ ಸೂಚನಾ ಪತ್ರವನ್ನು ಹೊರಡಿಸಿರುವುದಿಲ್ಲ ಮತ್ತು ಸಿಂಡಿಕೇಟ್ ಸಭೆಯಿಂದ ಈ ಸಮಿತಿಗೆ ನೀಡಲಾಗಿದ್ದ ಅರ್ಜಿಗಳನ್ನು ಪರಿಶೀಲಿಸುವಾಗ, ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಬಿ.ವೆಂಕಟೇಶ್ ರವರ ಅರ್ಜಿಯನ್ನು ಈಗಾಗಲೇ ಸಲ್ಲಿಸಿದ್ದೇನೆ ಅವರ ಅರ್ಜಿಯನ್ನು ಈ ಸಮಿತಿಯಲ್ಲಿ ಸೇರಿಸಿ ಸಭಾ ನಡಾವಳಿಗಳನ್ನು ಬರೆಯಲು ಕೋರಿದ್ದರು. ಆದುದರಿಂದ ಸಭಾ ನಡಾವಳಿಗಳನ್ನು ಬರೆಯುವಾಗ, ಶ್ರೀ ಬಿ.ವೆಂಕಟೇಶ್ ಅವರ ಹೆಸರನ್ನು ಸೇರಿಸಲಾಗಿದೆ ಮತ್ತು ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದು ಎಂದು ಭಾವಿಸಿದ್ದೆ ಆದುದರಿಂದ ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ ಎಂದು ವಿವರಣೆ ನೀಡಿದರು.

ಚರ್ಚೆ ಆದ 6 ಅರ್ಜಿಗಳ ಜೊತೆಗೆ ಈ ಅರ್ಜಿಯು ಬರುವುದಿಲ್ಲ ಎಂದರೂ ಸಹ ಅವರ ಹೆಸರನ್ನು ಕಳುಹಿಸಿದೆ. ಆರ್.ಎನ್. ಪ್ರಕಾಶ್ ರವರನ್ನು ಈಶ್ವರಚಾರಿ ಅವರ ಸ್ಥಾನಕ್ಕೆ, ಮತ್ತು

ಕುಲಸಚಿವರು(ಮೌಲ್ಯಮಾಪನ) ನವರು ನಾಗರಾಜರವರ ಹೆಸರನ್ನು ಪರೀಕ್ಷಾ ವಿಭಾಗಕ್ಕೆ ಪ್ರಸ್ತಾವನೆ ಮಾಡಿದ್ದಾರೆ. ಸಿಂಡಿಕೇಟ್ ಸದಸ್ಯರ ಕೋರಿಕೆಯಂತೆ ವೆಂಕಟೇಶ್ ರವರ ಹೆಸರನ್ನು ಸೇರಿಸಲಾಗಿದೆ. ಅವಶ್ಯಕತೆ ಇದ್ದರೆ ತೆಗೆದುಕೊಳ್ಳಿ, ಚರ್ಚೆ ಮಾಡುವುದೇ ಬೇರೆ ನಿರ್ಣಯವೇ ಬರಹದಲ್ಲಿ ಬರೆಯುವುದು ಬೇರೆಯಾಗಿರುತ್ತದೆ ಎಂದರು. ಜನವರಿ 1 ರಿಂದ online class ಪ್ರಾರಂಭವಾಗಿದ್ದುದರಿಂದ ಅವರಿಗೆ, ಈ ಕಡೆ ಗಮನ ಹರಿಸಲು ಸಾಧ್ಯವಾಗಲಿಲ್ಲ. ಸಿಂಡಿಕೇಟ್ ಯಾವುದೇ ನಿರ್ಣಯವನ್ನು ಮಾಡಬಹುದಾದ ಅಧಿಕಾರ ಹೊಂದಿದೆ ಎಂದರು. ಮತ್ತೊಮ್ಮೆ ಪ್ರಸ್ತಾವನೆ ತಂದು ಆಮೇಲೆ ಆದೇಶ ಹೊರಡಿಸಿ ಎಂದರು. ಸ್ಥಾಯಿ ಸಮಿತಿಯ ನಡಾವಳಿಗಳನ್ನು ಈ ಸಭೆಯಲ್ಲಿ ಮಂಡಿಸಿರುವುದಿಲ್ಲವೆಂದು ಅಭಿಪ್ರಾಯಪಟ್ಟರು

ಸದಸ್ಯರಾದ ಶ್ರೀ ಹರಿಪ್ರಸಾದ್ ರವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2015 (ಕರ್ನಾಟಕ ಅಧಿನಿಯಮ 2000 ಪ್ರಕರಣ 57 ರ ಪ್ರಕಾರ ಯಾವುದೇ ನೌಕರರನ್ನು ಕೆಲಸಕ್ಕೆ (appointment) ಮಾಡಿಕೊಳ್ಳುವುದು ಕಾನೂನು ಬಾಹಿರ ಮತ್ತು ಸ್ಥಾಯಿ ಸಮಿತಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಆದುದರಿಂದ ಈ ವಿಷಯದ ಬಗ್ಗೆ ಅವರ ಆಕ್ಷೇಪಣೆ ಇರುತ್ತದೆ ಎಂದರು. ಎಲ್ಲಾ ಅರ್ಜಿಗಳನ್ನು ಸ್ಥಾಯಿ ಸಮಿತಿಯ ವರದಿಯೊಂದಿಗೆ ಮಂಡಿಸಬೇಕಾಗಿತ್ತು ಎಂದು ಸಭೆಗೆ ತಿಳಿಸಿದರು.

ಕುಲಸಚಿವರು(ಮೌಲ್ಯಮಾಪನ), ಪಿ.ಹೆಚ್‌ಡಿ ವಿಭಾಗದಲ್ಲಿ ಕೆ. ನಾಗರಾಜು ರವರ ಸೇವೆಯ ಅವಶ್ಯಕತೆ ಇದೆ, ಘಟಿಕೋತ್ಸವ ಮಾಡಬೇಕು. ಪಿ.ಹೆಚ್‌ಡಿ ವಿದ್ಯಾರ್ಥಿಗಳಿಗೆ 3 ತಿಂಗಳಿಂದ Scholarship ತೊಂದರೆ ಆಗಿದೆ (delay) ಈ ಹಿಂದೆ ಇದ್ದವರು Course Work ಶುರುಮಾಡಿದ್ದಾರೆ. ಪ್ರಾಮಾಣಿಕ ಸಿಬ್ಬಂದಿಯ ಅಗತ್ಯತೆ ಇದೆಯೆಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ 4+1 ನಿವೃತ್ತ ನೌಕರರ ಸೇವೆಯನ್ನು ಪಡೆಯಲು ಅನುಮತಿಸಲಾಗಿದೆ, ಅದರಂತೆ ಕ್ರಮವಹಿಸಲು ತಿಳಿಸಿದರು.

ಸದಸ್ಯರಾದ ಶ್ರೀ ಕರಣ್ ಕುಮಾರ್, 4+1 ಸಮಾಲೋಚಕರಾಗಿ ಆದೇಶ ನೀಡಿ ಎಂದರು.

**ಸಿಂಡಿಕೇಟ್ ನಿರ್ಣಯ:**

**ಕೆಳಕಂಡ ನಾಲ್ಕು + ಒಂದು ನಿವೃತ್ತ ನೌಕರರನ್ನು ಸಮಾಲೋಚಕರಾಗಿ ಪರಿಗಣಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

**ದಿನಾಂಕ 20.01.2021 ರಿಂದ 6 ತಿಂಗಳ ಅವಧಿಗೆ ಜಾರಿಗೆ ಬರುವಂತೆ ಆದೇಶ ನೀಡಲು ನಿರ್ಣಯಿಸಿತು.**

| | | | |
|---|---|---|---|
| | | | **ನಿಗದಿಪಡಿಸಿದ ಸಂಭಾವನೆ** |
| **1.** | **ಶ್ರೀಮತಿ ನಾಗರತ್ನ** | .. | **ರೂ. 25,000/- ಮಾಹೆಯಾನ** |
| **2.** | **ಶ್ರೀ ಹನುಮಂತರಾಯಪ್ಪ** | .. | **ರೂ. 25,000/- ಮಾಹೆಯಾನ** |
| **3.** | **ಶ್ರೀಮತಿ ಎಂ. ಮಾಯಮ್ಮ** | .. | **ರೂ. 25,000/- ಮಾಹೆಯಾನ** |
| **4.** | **ಶ್ರೀ ಕೆ. ನಾಗರಾಜು** | .. | **ರೂ. 25,000/- ಮಾಹೆಯಾನ** |

**ಶ್ರೀ ವೆಂಕಟೇಶ್ ರವರ ಅರ್ಜಿಗೆ ಸಂಬಂಧಿಸಿದಂತೆ, ಮುಂದಿನ ದಿನಗಳಲ್ಲಿ ಅವಶ್ಯಕತೆ ಕಂಡು ಬಂದರೆ ಅವರ ಸೇವೆ ತೆಗೆದುಕೊಳ್ಳುವ ಬಗ್ಗೆ ಸಿಂಡಿಕೇಟ್ ಸೂಕ್ತ ನಿರ್ಣಯ ಮಾಡಬಹುದು.**

**ಸಾಮಾನ್ಯ ಚರ್ಚೆ:**

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ವಿದ್ಯಾರ್ಥಿಗಳ ತರಬೇತಿಗೆ ಅವಶ್ಯಕವಾಗಿರುವ ಬಾನುಲಿ ತರಬೇತಿಗೆ ಒಂದು ಅಂತರ್‌ಜಾಲ ರೇಡಿಯೋ (Web Radio Platform) ಸ್ಥಾಪಿಸಲು ತಗಲಬಹುದಾದ ಅಂದಾಜು ರೂ. 6.00 ಲಕ್ಷದಿಂದ ರೂ. 8.00 ಲಕ್ಷಗಳ ವೆಚ್ಚವಾಗಬಹುದು. ವಿಭಾಗದ ಖರ್ಚು ವೆಚ್ಚಗಳ ಅಡಿಯಲ್ಲಿ ನಿಗದಿ ಪಡಿಸಲಾಗಿರುವ ಆಯವ್ಯಯ ಅಂದಾಜುಗಳಲ್ಲಿ ಹಣದ ಲಭ್ಯತೆ ಇರುವುದರ ಬಗ್ಗೆ ಖಾತರಿ ಪಡಿಸಿಕೊಂಡು ಬಾನುಲಿಯನ್ನು ನಿಯಾಮಾವಳಿಗಳಂತೆ ಖರೀದಿ ಮಾಡಲು ಕೋರಿದರು.

**ಸಿಂಡಿಕೇಟ್ ನಿರ್ಣಯ:**

**ಸಭೆ ಸರ್ವಾನುಮತದಿಂದ ಅನುಮತಿ ನೀಡಿತು.**

ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಸದಸ್ಯ ಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ